ಎನ್ನುವುದರ ಬಗ್ಗೆ ಬಹಳ ವಿವರವಾಗಿ ತಯಾರಿ ನಡೆಸಿಕೊಂಡು ಬಂದಿದ್ದೇನೆ. ಈಗ ತಾವು ನನಗೆ ಮಾತನಾಡಲು ಅವಕಾಶ ಕೊಡುತ್ತೀರಿ ಎಂದು ಭಾವಿಸಿದ್ದೇನೆ. ನಾನು ಯಾರನ್ನು ನೋಡಿ ಮಾತನಾಡಲಿ. ಮಾನ್ಯ ರೋಷನ್ ಬೇಗ್‌ರವರು ನಮ್ಮ ಜೊತೆಯಲ್ಲಿದ್ದವರು, ನಮಗೆ ಬಹಳ ಪ್ರೋತ್ಸಾಹ ಕೊಟ್ಟು ಯಾವಾಗಲೂ ನಗುನಗುತ್ತಾ ಕುಳಿತಿರತಕ್ಕಂಥವರು. ಅವರ ಮುಖವನ್ನು ನೋಡಿದರೆ ನನಗೆ ಮಾತನಾಡಲು ಯಾವ ವಿಚಾರವೂ ಬರುವುದಿಲ್ಲ. ನಮ್ಮವರೇ ಆಗಿರತಕ್ಕಂಥ ಮಾನ್ಯ ಇನಾಂದಾರ್‌ರವರು ಹಿಂದೆ ನಮ್ಮಲ್ಲಿ ಅಬಕಾರಿ ಮಂತ್ರಿಗಳಾಗಿದ್ದರು. ನಮ್ಮ ಸ್ನೇಹಿತರನ್ನು ನೋಡಿ ಮಾತನಾಡಲು ನಮಗೆ ಏನು ಇನ್‌ಸ್ಪಿರೇಷನ್ ಬರುತ್ತದೆ, ಯಾವ ಉತ್ಸಾಹ ಬರುತ್ತದೆ, ಆ ಕಡೆ ನೋಡಿ, ನಮ್ಮ ಸ್ನೇಹಿತರಾದ ಯಾವಗಲ್‌ರವರು ನಗುತ್ತಾ ಕುಳಿತಿದ್ದಾರೆ.

ಅಧ್ಯಕ್ಷರು: ಕಾಂಗ್ರೆಸ್ ಶಾಸಕಾಂಗ ಪಕ್ಷದ ಕಾರ್ಯದರ್ಶಿಗಳಾದ ಕರಿಯಣ್ಣನವರಿದ್ದಾರೆ, ನಾಡಗೌಡರಿದ್ದಾರೆ. ಪರಿಸ್ಥಿತಿ ಯಾವ ರೀತಿ ಇದೆ ಎಂದು ನೀವೇ ನೋಡಿ. ನಾನು ನಿಮಗೇನೂ ಹೇಳಬೇಕಾಗಿಲ್ಲ. ಈಗ ನಾನು ಇಕ್ಕಟ್ಟಿನಲ್ಲಿ ಸಿಕ್ಕಿಹಾಕಿಕೊಂಡಿದ್ದೇನೆ. ಒಂದು ರೋಸ್ಟರ್ ಸಿಸ್ಟಂ ಮಾಡಿಬಿಡಿ.

ಶ್ರೀ ಅಪ್ಪಾಜಿ.ಎಸ್.ನಾಡಗೌಡ: ನಾವು ಈಗಾಗಲೇ ಅದನ್ನು ಮಾಡಿದ್ದೇವೆ.

ಶ್ರೀ ಪಿ.ಜಿ.ಆರ್.ಸಿಂಧ್ಯ: ಈ ಸರ್ಕಾರದ ಧೋರಣೆಯನ್ನು ನಾವು ಪ್ರತಿಭಟನೆ ಮಾಡಿ ಸಭಾತ್ಯಾಗ ಮಾಡುತ್ತಿದ್ದೇವೆ. ಅವರೆಲ್ಲಾ ಬರಲಿ, ಆಮೇಲೆ ಕುಳಿತು ಮಾತನಾಡೋಣ. ನೀವು ಅವರನ್ನು ಕರೆಸಿ.

(ಈ ಹಂತದಲ್ಲಿ ಸಂಯುಕ್ತ ಜನತಾದಳದ ಶಾಸಕರು ಸಭಾತ್ಯಾಗ ಮಾಡಿದರು)

ಶ್ರೀ ಜಗದೀಶ್ ಶೆಟ್ಟರ್ (ವಿರೋಧ ಪಕ್ಷದ ನಾಯಕರು): ಸನ್ಮಾನ್ಯ ಅಧ್ಯಕ್ಷರೇ, ಗುರುವಾರವೂ ಇದೇ ಪರಿಸ್ಥಿತಿಯಾಗಿತ್ತು. ನಾನೇ ರೈಸ್ ಮಾಡಿದ್ದ. ಇವರದ್ದು ದಪ್ಪ ಚರ್ಮವಾಗಿಬಿಟ್ಟಿದೆ. ಏನು ಮಾಡಿದರೂ ನಡೆಯುತ್ತದೆ, ಪ್ರತಿಪಕ್ಷದವರು ಬೇಕಾದಷ್ಟು ಮಾತನಾಡಲಿ, ಬೇಕಾದ್ದು ಮಾಡಲಿ, ಕಿಡಿಕಾರಲಿ, ಅದೇನೂ ಅವರಿಗೆ ಹತ್ತುವುದೇ ಇಲ್ಲ. ಗುರುವಾರದ ದಿವಸವೂ ಇದೇ ಪರಿಸ್ಥಿತಿ ಇತ್ತು. ಆಗಲೂ ಪ್ರತಿಪಕ್ಷದವರಾದ ನಾವೆಲ್ಲರೂ ರಿಪೀಟೆಡ್‌ಲಿ ಇದನ್ನೇ ಮಾತನಾಡಿದ್ದೇವೆ. ಏನಾದರೂ ಅವರಿಗೆ ಬಿಸಿ ಹತ್ತುವುದಿಲ್ಲ. ಅದಕ್ಕಾಗಿ ತಾವು ಬಿಸಿ ಮುಟ್ಟಿಸುವಂಥ ಕೆಲಸವನ್ನೇನಾದರೂ ಮಾಡಿದರೆ ಅವರು ಬರುತ್ತಾರೆ. ಇಲ್ಲದಿದ್ದರೆ ಬರುವುದಿಲ್ಲ. ಈ ರೀತಿಯ ವ್ಯವಸ್ಥೆ ಇದ್ದರೆ ನಾವು ಯಾವ ರೀತಿ ಸದನದಲ್ಲಿ ಚರ್ಚೆ ಮಾಡಬೇಕು? ಪ್ರತಿಪಕ್ಷದವರು ಏನು ಚರ್ಚೆ ಮಾಡಲು ಅವಕಾಶವಿದೆ? ಅವರು ಸದನದ ವ್ಯವಸ್ಥೆಗೆ, ಪ್ರಜಾಪ್ರಭುತ್ವ ವ್ಯವಸ್ಥೆಗೆ ಅವಮಾನ ಮಾಡುತ್ತಿದ್ದಾರೆ.

ಅಧ್ಯಕ್ಷರು: ಈಗ ಸದನದಲ್ಲಿ ಮಂತ್ರಿಗಳಿಲ್ಲ, ಅಧಿಕಾರಿಗಳಿಲ್ಲ, ಯಾರಿಗೆ ಅವರು ಹೇಳುವುದು?

ಶ್ರೀ ಜಗದೀಶ್ ಶೆಟ್ಟರ್: ಈ ನಿಟ್ಟಿನಲ್ಲಿ ಸರ್ಕಾರದ ನೀತಿ, ಸರ್ಕಾರ ಈ ಸದನಕ್ಕೆ ತೋರಿಸುತ್ತಿರುವಂಥ ಅಗೌರವವನ್ನು ನಾವು ಪ್ರತಿಭಟಿಸಿ ಸಭಾತ್ಯಾಗ ಮಾಡುತ್ತಿದ್ದೇವೆ.

(ಈ ಹಂತದಲ್ಲಿ ಭಾರತೀಯ ಜನತಾ ಪಕ್ಷದ ಶಾಸಕರು ಸಭಾತ್ಯಾಗ ಮಾಡಿದರು)

ಶ್ರೀ ಸಿ.ಬೈರೇಗೌಡ: ಮಾನ್ಯ ಅಧ್ಯಕ್ಷರೇ, ನಾನು ಬಹಳ ಶ್ರಮವಹಿಸಿ, ಇವತ್ತು ಮಾತನಾಡಲೇಬೇಕು ಎಂದು ತಯಾರಿ ನಡೆಸಿಕೊಂಡು ಬಂದಿದ್ದೇನೆ. 'ನಾಳೆ ಯಾವುದೇ ಪರಿಸ್ಥಿತಿ ಬಂದರೂ ಕೂಡ ಮುಖ್ಯಮಂತ್ರಿಗಳು ಉತ್ತರ ಕೊಡಬೇಕು' ಎಂದು ತಾವು ಅಪ್ಪಣೆ ಕೊಡಿಸಿದ್ದೀರಿ. ಈಗ ನಾವು ಯಾರಿಗೆ ಹೇಳಬೇಕು. ನನಗೆ ವೇಳೆ (ಸಮಯ) ಕೊಡತಕ್ಕಂಥವರು ಯಾರು? ನಾನು ಮಾತನಾಡಲೇಬೇಕು ಎಂದು ಇದ್ದೇನೆ. ಯಾವ ರೀತಿ ಇಲ್ಲಿ ಮಾತನಾಡುವುದು ಹೇಳಿ? ನಾನು ಶ್ರಮ ವಹಿಸಿ ರಾತ್ರಿಯೆಲ್ಲಾ ನಿದ್ರೆಗೆಟ್ಟು ತಯಾರಿ ನಡೆಸಿದ್ದೇನೆ.

ಅಧ್ಯಕ್ಷರು: ಅವರು ಏನು ಮಾತನಾಡುತ್ತಾರೆ, ಅದನ್ನು ನೋಟ್ ಮಾಡಿಕೊಳ್ಳಲಾದರೂ ಅಧಿಕಾರಿಗಳು ಬೇಡವೇ?

ಶ್ರೀ ಸಿ.ಬೈರೇಗೌಡ: ಇವರನ್ನು ಏನೆಂದು ಕರೆಯಬೇಕು ಎಂದು ನನಗೆ ಪದ ಗೊತ್ತಾಗುತ್ತಿಲ್ಲ. ಈ ಸಭೆಯನ್ನು ಕಂಡರೆ, ಈ ರೀತಿಯಾದಂಥ ಅಸಡ್ಡೆ, ಅನಾದರಣವೆಂದರೆ ಅದು ಇಡೀ ರಾಜ್ಯದ ಜನತೆಗೆ, ಈ ಸರ್ಕಾರ ಮಾಡಿರತಕ್ಕಂಥ ಅವಮಾನ. ಈ ಅವಮಾನವನ್ನು ಸಹಿಸಿಕೊಂಡು ಇಲ್ಲಿ ಭಾಷಣ ಮಾಡುವುದಕ್ಕಾಗಲೀ ಅಥವಾ ಕಲಾಪಗಳಲ್ಲಿ ಭಾಗವಹಿಸಲಾಗಲೀ ನಾನಂತೂ ತಯಾರಿಲ್ಲ. ನಾನು ಇದನ್ನು ಪ್ರತಿಭಟನೆ ಮಾಡಿ ಹೊರಗಡೆ ಹೋಗುತ್ತಿದ್ದೇನೆ.

(ಈ ಹಂತದಲ್ಲಿ ಸದಸ್ಯರಾದ ಶ್ರೀ ಸಿ.ಬೈರೇಗೌಡರವರು ಸಭಾತ್ಯಾಗ ಮಾಡಲು ಹೊರಟರು)

ಅಧ್ಯಕ್ಷರು: ಈಗ ಸಭೆಯನ್ನು ಮುಂದೂಡಿ ಪುನಃ ಮೂರೂಮುಕ್ಕಾಲಿಗೆ ಸೇರೋಣ, ಅಷ್ಟರಲ್ಲಿ ಮಂತ್ರಿಗಳನ್ನು ಅಧಿಕಾರಿಗಳನ್ನು ಕರೆಸಿ.

(ಸನವು 3.17ಕ್ಕೆ ಮುಕ್ತಾಯವಾಗಿ ಪುನಃ 3.45ಕ್ಕೆ ಸೇರಲು ತೀರ್ಮಾನಿಸಿತು)

(ಸದನವು ಮತ್ತೆ ಮೂರು ಘಂಟೆ ಐವತ್ತು ನಿಮಿಷಕ್ಕೆ ಸೇರಿತು (ಸನ್ಮಾನ್ಯ ಸಭಾಧ್ಯಾಕ್ಷರು ಪೀಠವನ್ನು ಅಲಂಕರಿಸಿದ್ದರು)